ನನ್ನ ಕನಸುಗಳಿಗೊಂದು ಲೆಕ್ಕವಿಲ್ಲ. ಚಿಕ್ಕವಳಿದ್ದಾಗ ಉದ್ದವಾಗಬೇಕೆಂಬ ಕನಸು. ದೊಡ್ಡವಳಾದ ಮೇಲೆ ತೆಳ್ಳಗಾಗಬೇಕೆಂಬ ಕನಸು. ಚಿಕ್ಕವಳಿದ್ದಾಗ ಕತೆ ಕೇಳುವಾಗ ಕತೆಯಲ್ಲಿ ಬರುವ ರಾಣಿಯಾಗಬೇಕೆಂಬ ಕನಸು. ನನ್ನ ಕನಸುಗಳು ಹಂತ ಹಂತಕ್ಕೂ ಬದಲಾಗುತ್ತಾ ಬಂದಿವೆ. ಚಿಕ್ಕವಳಿದ್ದಾಗ 'ಟೀಚರ್ ಆಗುತ್ತೇನೆ' ಎನ್ನುತ್ತಿದ್ದ ನಾನು ಒಂದು ಹಂತದಲ್ಲಿ 'ಡಾಕ್ಟರ್ ಆಗುತ್ತೇನೆ' ಎನ್ನುತ್ತಿದ್ದೆ. ಅದ್ಯಾವುದೋ ಧಾರಾವಾಹಿ ನೋಡಿ ಒಂದಿಷ್ಟು ದಿನ 'ಗಗನ ಸಖಿ' ಆಗುವ ಬಯಕೆಯೂ ಇತ್ತು. ರವೀಂದ್ರ ಕಲಾಕ್ಷೇತ್ರದಿಂದ ನಾಟಕ ನೋಡಿ ಬರುವಾಗ, 'ನಾನು ನಾಟಕ ಮಾಡಬೇಕು, ರಂಗಭೂಮಿ ಸೇರಬೇಕು' ಎನಿಸುತ್ತಿತ್ತು. ಪಿಯುಸಿಯಲ್ಲಿದ್ದಾಗ 'ಛೆ, ಈ ಓದೆಲ್ಲಾ ಬಿಟ್ಟು ರೇಡಿಯೊ ಜಾಕಿ ಆಗಿಬಿಡಬೇಕು' ಅಂದುಕೊಂಡಿದ್ದೆ. ಇನ್ನೂ ಏನೇನೋ ಅಂದುಕೊಂಡಿದ್ದೆ. ಆದರೆ, ಕೊನೆಗೆ ಆಗಿದ್ದು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರ್! ಕೆಲಸ ಮಾಡಿದ್ದು ಸಾಫ್ಟ್‌ವೇರ್ ಜಗತ್ತಿನಲ್ಲಿ.



ನಾವು ಜೀವನದಲ್ಲಿ ಏನೋ ಆಗಬೇಕು ಎನ್ನುವುದು ಒಂದು ಬಗೆಯ ಕನಸು, ನಾವು ಮಲಗಿದಾಗ ಬೀಳುವ ಕನಸು, ಎಚ್ಚರದಲ್ಲೂ ಕಾಣುವ ಹಗಲುಗನಸು, ಭವ್ಯ ಭವಿಷ್ಯಕ್ಕಾಗಿ ಕಾಣುವ ಉದಾತ್ತ ಕನಸು ಹೀಗೆ ಕನಸುಗಳಲ್ಲಿ ಹಲವಾರು ವಿಧ. ಕನಸಿನ ಬಗ್ಗೆ ಹೇಳುವಾಗ ನನಗೆ ಬಿದ್ದ ಎರಡು ಕನಸುಗಳ ಬಗ್ಗೆ ಹೇಳಲೇ ಬೇಕು. 'ಬೆಳದಿಂಗಳ ಬಾಲೆ' ಸಿನಿಮಾ ನಿಮಗೆ ನೆನಪಿರಬಹುದು. ಅದು ತೆಲುಗು ಲೇಖಕ ಯಂಡಮೂರಿ ವೀರೇಂದ್ರನಾಥ್ ಅವರ ಕಾದಂಬರಿ ಆಧರಿಸಿ ಸುನೀಲ್‌ಕುಮಾರ್ ದೇಸಾಯಿ ನಿರ್ದೇಶಿಸಿದ ಸಿನಿಮಾ. ಇದನ್ನು ಅಪ್ಪನೊಂದಿಗೆ ನೋಡಿ ಬಂದ ಎಂಟು ವರ್ಷದ ನನಗೆ 'ಬೆಳದಿಂಗಳ ಬಾಲೆ' ಆ ರಾತ್ರಿ ಕನಸಿನಲ್ಲಿ ಬಂದುಬಿಟ್ಟಳು. ನನ್ನದೇ ವಯಸ್ಸಿನ ಹುಡುಗಿಯಾಗಿ, ಫ್ರಾಕ್ ತೊಟ್ಟು ನನ್ನದೇ ಶಾಲೆಗೆ ಬಂದಿದ್ದಳು. ಸಿನಿಮಾದಲ್ಲಿ ತನ್ನನ್ನು ಕಾಡುವ ಬೆಳದಿಂಗಳ ಬಾಲೆ ಯಾರೆಂದು ಸಿನಿಮಾ ನಾಯಕ ಅನಂತ ನಾಗ್ ಹುಡುಕುತ್ತಿರುತ್ತಾರೆ. ಅವಳು ಯಾರೂ ಆಗಿರಬಹುದು, ನಮಗೆ ಪರಿಚಯ ಇರುವವಳು, ಇಲ್ಲದೆ ಇರುವವಳು. ಆದರೆ, ನನ್ನ ಕನಸಿನಲ್ಲಿ ಬೆಳದಿಂಗಳ ಬಾಲೆ ನನಗೆ ಬೇಕಾದ ರೂಪದಲ್ಲಿ ಬಂದಿದ್ದಳು.

ಇನ್ನೊಂದು ಅಚ್ಚಳಿಯದೆ ಉಳಿದ, ನನಗೆ ಅಚ್ಚರಿ ಮೂಡಿಸಿದ ಕನಸು ನನ್ನ ತಂದೆಯ ಆಫೀಸಿನ ಒಬ್ಬ ಆಫೀಸ್ ಬಾಯ್ ಬಗ್ಗೆ. ತಪ್ಪು ತಿಳಿಯಬೇಡಿ, ಅವನ ಬಗ್ಗೆ ನಾನು ಕನಸು ಕಂಡಿದ್ದಲ್ಲ! ಅಪ್ಪನ ಆಫೀಸಿನ ಈ ಹುಡುಗ ತುಂಬಾ ಮುಗ್ಧ (ಅಥವಾ ನಾವು ಹಾಗೆ ಅಂದುಕೊಂಡಿದ್ದೆವು). ಅವನ ಹೆಸರು ರಾಜ. ಅವನು ತನ್ನ ಹಳ್ಳಿಯಿಂದ ಬರುವಾಗ ಬಗೆ ಬಗೆಯ ಸೊಪ್ಪು ತಂದುಕೊಡುತ್ತಿದ್ದ. ನಾನು ಶಾಲೆಗೆ ಡಬ್ಬಿ ಮರೆತು ಹೋದಾಗ ಅವನೇ ಸೈಕಲ್ ಮೇಲೆ ಬಂದು ಕೊಟ್ಟು ಹೋಗಿದ್ದ. ಒಟ್ಟಿನಲ್ಲಿ ನಮ್ಮ ಮನೆಗೆ ಬೇಕಾದವನಾಗಿ ನಮ್ಮ ಪ್ರೀತಿ ಗಳಿಸಿದ್ದ.

ಒಂದು ರಾತ್ರಿ ನನ್ನ ಕನಸಿನಲ್ಲಿ ಈ ರಾಜ ಬಂದುಬಿಟ್ಟ. ಆದರೆ, ರಾಜನಾಗಿ ಅಲ್ಲ ಒಬ್ಬ ಕಳ್ಳನಾಗಿ! ನಮ್ಮ ಮನೆಯ ವಸ್ತುಗಳನ್ನೇ ಕಳ್ಳತನ ಮಾಡಿದ್ದ ರಾಜ. ಇದಾದ ಕೆಲವೇ